ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 6, May-June, 2023, Pp 29-34.**
**©*IIMRD*, Mysuru**
**www.iimrd.com**

# ಬಸವಣ್ಣನ ಕಾಲದ ಪ್ರಜಾಪ್ರಭುತ್ವ ಹಾಗು ಸಂವಿಧಾನದ ಅಂಶಗಳು

**ಕನ್ಯಾಕುಮಾರಿ. ಎಸ್***

*ಸಹಾಯಕ ಪ್ರಾಧ್ಯಾಪಕರು, ಮಾನವಿಕ ಮತ್ತು ಸಮಾಜ ವಿಜ್ಞಾನ ವಿಭಾಗ, ರಾಮಯ್ಯ ತಾಂತ್ರಿಕ ಮಹಾವಿದ್ಯಾಲಯ, ಬೆಂಗಳೂರು.

***ಸಾರಾಂಶ:(Abstract)***

*ಜಗತ್ತಿನಲ್ಲಿ ಪ್ರಜಾಪ್ರಭುತ್ವ ಹಾಗು ಸಂವಿಧಾನದ ಮಾದರಿ ನೆಲೆಗೊಂಡಿರದ ಕಾಲದಲ್ಲಿ ಬಸವಣ್ಣನವರು ಪ್ರಜಾಪ್ರಭುತ್ವದ ತತ್ವಗಳನ್ನು ನೆಲೆಗೊಳಿಸಿದರು. ಸಂವಿಧಾನದ ಲಕ್ಷಣಗಳನ್ನೊಳಗೊಂಡ ವೇದಿಕೆಯನ್ನು ಪ್ರಸ್ತುತ ಪಡಿಸಿದರು. ಪ್ರಜಾಪ್ರಭುತ್ವದ ಮೌಲ್ಯಗಳನ್ನು ಸ್ಪಷ್ಟೀಕರಿಸುವ ಸ್ವಾತಂತ್ರ್ಯ, ಸಮಾನತೆ, ಶಿಕ್ಷಣ ಸಾರ್ವತ್ರಿಕವಾಗಬೇಕೆಂದು ಘೋಷಿಸಿ ಹನ್ನೆರಡನೆ ಶತಮಾನದಲ್ಲಿಯೇ ಜಾತ್ಯತೀತ ಸಮಾಜಕ್ಕೆ ಒತ್ತು ನೀಡಿದ್ದರು. ಮಾನವೀಯತೆಗೆ ಪ್ರಾಧಾನ್ಯತೆ ನೀಡಿದ್ದ ಬಸವಣ್ಣ ಇಂದಿನ ವಿಶ್ವಮಾನವ ಹಕ್ಕುಗಳನ್ನು ಕಾರ್ಯರೂಪದಲ್ಲಿ ತಂದಿದ್ದರು. ಇಂದಿನ ಪ್ರಜಾಪ್ರಭುತ್ವದ ಸಂವಿಧಾನಬದ್ಧ ಮೂಲಭೂತ ಹಕ್ಕುಗಳು ಬಸವಣ್ಣನ ಕಾಲದಲ್ಲಿಯೇ ಪ್ರತಿಫಲಿತವಾಗಿದ್ದವು. ನಮ್ಮ ಭಾರತಿಯ ಸಂವಿಧಾನದ ಮುಖ್ಯ ಲಕ್ಷಣಗಳನ್ನು ಪ್ರತಿಬಿಂಬಿಸುತ್ತಿದ್ದ ಅನುಭವ ಮಂಟಪವು ಸಾಮಾಜಿಕ ಸ್ಪಂದನೆ ಮತ್ತು ವ್ಯಕ್ತಿ ವಿಕಾಸನದ ವೇದಿಕೆಯಾಗಿತ್ತು. ಜಾತಿ–ಭೇಧಗಳ ತಾರತಮ್ಯವಿಲ್ಲದೆ, ಲಿಂಗಭೇಧಗಳ ಅಸಮಾನತೆ ಇಲ್ಲದೆ, ಸರ್ವರೂ ಅನುಭವ ಮಂಟಪದಲ್ಲಿ ಮುಕ್ತವಾಗಿ ಚರ್ಚಿಸಬಹುದಾಗಿತ್ತು. ತಮ್ಮ ಅಭಿಪ್ರಾಯಗಳನ್ನು ವಿಚಾರ ಗೋಷ್ಠಿಗಳಲ್ಲಿ ಮಂಡಿಸಬಹುದಾಗಿತ್ತು. ಅನುಭವ ಮಂಟಪದಲ್ಲಿ ನಡೆಯುತ್ತಿದ್ದ ಈ ವಿಚಾರಗೋಷ್ಠಿಗಳು ಆಧುನಿಕ ಪ್ರಜಾಪ್ರಭುತ್ವದ ಮಾದರಿಯಂತೆಯೇ ಪ್ರಜಾಪ್ರಭುತ್ವದ ವೇದಿಕೆಯಾಗಿ, ಬಸವಾದಿ ಶರಣರ ಕಾಲದಲ್ಲಿಯೇ ಕಾರ್ಯ ನಿರ್ವಹಿಸುತ್ತಿದ್ದವೆಂಬುದನ್ನು ಈ ಅಂಶಗಳು ನಿರೂಪಿಸುತ್ತವೆ.*

***ಮುಖ್ಯಪದಗಳು (Keywords)*** *ಅನುಭವ ಮಂಟಪ, ಪ್ರಜಾಪ್ರಭುತ್ವ ಮೌಲ್ಯ, ಸಂವಿಧಾನ, ಮೂಲಭೂತ ಹಕ್ಕುಗಳು.*

## ಪೀಠಿಕೆ

‘ಹೊಸ ಘಟನೆಗಳು ಸಂಭವಿಸಿದಾಗ ಇತಿಹಾಸ ಮರು ವ್ಯಾಖ್ಯಾನಿಸಲ್ಪಡುತ್ತದೆ ಹಾಗು ಪುನರ್ ರಚಿಸಲ್ಪಡುತ್ತದೆ ‘ಎನ್ನುವ ನುಡಿಯಂತೆ, ಸಾಮಾಜಿಕ ಭಿನ್ನತೆ, ರಾಜಕೀಯ ಅಸ್ಥಿರತೆ, ಧಾರ್ಮಿಕ ಸಂಘರ್ಷಗಳು ಬದಲಾವಣೆಗಳಿಗೆ ಕಾರಣಗಳಾಗಿ, ಸಮಾಜ/ಸರಕಾರಗಳು ಪುನರ್ ಸ್ಥಾಪಿತವಾಗಿರುವುದಕ್ಕೆ ವಿಶ್ವ ಸಾಕ್ಷಿಯಾಗಿದೆ. ಅಂತೆಯೇ ಮಧ್ಯಕಾಲಿನ ಯುಗವು ಅದರಲ್ಲೂ ಹನ್ನೆರಡನೆ ಶತಮಾನ ಪರಿವರ್ತನೆಗಳನ್ನು ಸೃಷ್ಟಿಸಿ, ಹೊಸ ಸಮಾಜ ರಚನೆಯಾಯಿತು. ಈ ನಿಟ್ಟಿನಲ್ಲಿ ವಚನ ಸಾಹಿತ್ಯ ಮತ್ತು ವಿಶ್ವ

*Please cite this article as: ಕನ್ಯಾಕುಮಾರಿ. ಎಸ್.* (2023). ಬಸವಣ್ಣನ ಕಾಲದ ಪ್ರಜಾಪ್ರಭುತ್ವ ಹಾಗು ಸಂವಿಧಾನದ ಅಂಶಗಳು. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 4(6). ಪು.ಸಂ. 29–34.*

ಮಾನವತಾವಾದಿ ಬಸವಣ್ಣನವರು ಕನ್ನಡ ನಾಡು ಹಾಗು ಕನ್ನಡ ಸಾಹಿತ್ಯದಲ್ಲಾದ ಪರಿವರ್ತನೆಗಳಿಗೆ ಸಾಕ್ಷಿಯಾಗಿದ್ದಾರೆ. ಮಾನವ ಜೀವನದ ಇತಿಹಾಸದುದ್ದಕ್ಕು ಅಸಮಾನತೆ ಎನ್ನುವುದು ವ್ಯಾಪಿಸಿದೆ, ಇದು ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ, ಶೈಕ್ಷಣಿಕ, ಆರ್ಥಿಕ ಜೀವನದ ಪ್ರತಿಯೊಂದು ಹಂತದಲ್ಲೂ ಕಂಡು ಬರುತ್ತದೆ. ಹೀಗೆ ಅಸಮಾನತೆ–ಶೋಷಣೆಗಳು ಅಟ್ಟಹಾಸ ಮಾಡಿದಾಗ ಮಟ್ಟ ಹಾಕುವಂತಹ ಒಂದು ವಿಶಿಷ್ಟ ಶಕ್ತಿ ಸಮಾಜವನ್ನು ಮುನ್ನೆಡೆಸಿ, ಮಾರ್ಗದರ್ಶನ ನೀಡಿ, ಸಾಮಾಜಿಕ ನ್ಯಾಯ ನೀಡಿ, ಸಾಮರಸ್ಯ ಮೂಡಿಸಿರುವಂತಹ ಉದಾಹರಣೆಗಳಿವೆ. ಹನ್ನೆರೆಡನೆ ಶತಮಾನದಲ್ಲಿ ಬಸವಣ್ಣ ನವರು ಅಂತಹ ವಿಶಿಷ್ಟ ಶಕ್ತಿಯಾಗಿ ಜನತೆಯನ್ನು ಒಟ್ಟುಗೂಡಿಸಿ ಸಾಮಾಜಿಕ ಸಾಮರಸ್ಯತೆ–ಸಹಬಾಳ್ವೆಯ ತತ್ವವನ್ನು ಭಿತ್ತಿ, ಸಮಾಜದ ಪರಿವರ್ತನೆಯ ದಿಕ್ಸೂಚಿಯಾಗಿ ಆದುನಿಕ ಪ್ರಜಾಪ್ರಭುತ್ವದ ಮಾದರಿಯನ್ನು ನಿರ್ಮಿಸಲು ಕಾರಣರಾದರು.

**ಪ್ರಜಾಪ್ರಭುತ್ವದ ಲಕ್ಷಣಗಳು**

ಜನಸಾಮಾನ್ಯರ ನಂಬಿಕೆಗಳ ಆಧಾರಗಳ ಮೇಲೆ ರಚಿತವಾದ ಚುನಾಯಿತ ಅಥವ ಜನ ಸಾಮಾನ್ಯರಿಂದಲೇ ಆಯ್ಕೆಯಾದ ಸರಕಾರ ಪ್ರಜಾಪ್ರಭುತ್ವ. ಇಂತಹ ಸರಕಾರದಲ್ಲಿ ಜನತೆಗೆ ಸಾರ್ವಭೌಮ ಅಧಿಕಾರ ನೀಡಲಾಗುವುದು. ಅಲ್ಲದೆ ಜನತೆ ಶಾಸನವನ್ನು ನಿರ್ಧರಿಸುವ ಹಕ್ಕನ್ನು ಹೊಂದಿರುತ್ತಾರೆ. ಕಾನೂನಿನ ಮುಂದೆ ಎಲ್ಲರೂ ಸಮಾನರಾಗಿರುತ್ತಾರೆ. ಶಾಸಕಾಂಗ ಕಾರ್ಯಾಂಗಗಳ ಪ್ರಕ್ರಿಯೆಗಳಲ್ಲಿ ಸಮಾನ ಪ್ರವೇಶ ಹೊಂದಿರುವ ಅವಕಾಶಗಳನ್ನು ಪ್ರಜಾಪ್ರಭುತ್ವ ತತ್ವಗಳು ಪ್ರತಿಫಲಿಸುತ್ತವೆ. ಪ್ರತಿಯೊಬ್ಬರು ಸಾಂಸ್ಕೃತಿಕ ಹಾಗು ಸಾಮಾಜಿಕ ಜೀವನದಲ್ಲಿ ಮುಕ್ತವಾಗಿ, ಸಂಪೂರ್ಣವಾಗಿ ಭಾಗವಹಿಸುವಂತಹ ಸಾಮರ್ಥ್ಯ ಕಲ್ಪಿಸುವುದು ಪ್ರಜಾಪ್ರಭುತ್ವದ ಮೂಲ ಲಕ್ಷಣವಾಗಿದೆ.

**ಉದ್ದೇಶ**

ಪ್ರಜೆಗಳ ನಡುವೆ ಸಮಾನತೆ ಮತ್ತು ಸ್ವಾತಂತ್ರ್ಯದ ಬಗ್ಗೆ ವಿಶ್ವಾಸ ಮೂಡಿಸುವುದು ಪ್ರಜಾಪ್ರಭುತ್ವ ಸರಕಾರದ ಉದ್ದೇಶ. ಪ್ರಜಾಪ್ರಭುತ್ವದಲ್ಲಿ ಬದಲಾವಣೆಗಳು ವ್ಯಕ್ತಿಗಳಿಂದಲೇ ಸಾದ್ಯವಾಗುತ್ತವೆ. ಯಾವಾಗ ಪ್ರಜೆಗಳು ಸಾಮಾಜಿಕ ಜವಾಬ್ದಾರಿ ಮತ್ತು ಮಾನವೀಯ ಮಹತ್ವವನ್ನು ಅರಿತು ಕಾರ್ಯ ಪ್ರವರ್ತರಾಗುತ್ತಾರೆಯೋ ಆಗ ಪ್ರಜಾಪ್ರಭುತ್ವದ ಸಿದ್ಧಾಂತಗಳಿಗೆ ಪ್ರಾಬಲ್ಯ ಬರುತ್ತದೆ.

**ಬಸವಣ್ಣನ ಕಾಲದ ಪ್ರಜಾಪ್ರಭುತ್ವ**

ಸಮಾನತೆ ಆಧ್ಯತೆ ನೀಡಿದ್ದ ಬಸವಣ್ಣನ ಕಾಲ ಇಂದಿನ ಜಾತ್ಯಾತೀತ ಸಂವಿಧಾನಿಕ ಅಂಶಗಳನ್ನು ಎತ್ತಿ ಹಿಡಿದಿತ್ತು. ಸಮಾನತೆ, ಸ್ವಾತಂತ್ರ್ಯ, ಸಾಮಾಜಿಕ ಸಹಬಾಳ್ವೆ, ಭಾವೈಕ್ಯತೆಯನ್ನು ಪ್ರತಿಪಾದಿಸಿ, ಸಮಸಮಾಜದ ಕನಸನ್ನು ಸಫಲವಾಗಿಸುವಲ್ಲಿ ಬಸವಣ್ಣ ದಿಟ್ಟ ಹೆಜ್ಜೆ ಇಟ್ಟಿದ್ದರು 'ಅವನ್ಯಾರವ–ಅವನ್ಯಾರವ ಎನ್ನದಿರಯ್ಯಾ 'ಇವ ನಮ್ಮವ ಇವನಮ್ಮವ ಎನ್ನಿರಯ್ಯಾ' ಎನ್ನುವ ಬಸವಣ್ಣನ ವಚನ ಸಾರ್ವತ್ರಿಕ ಭ್ರಾತೃತ್ವದ ಆಶಯವಾಗಿತ್ತು. ಭಾರತ ಸಂವಿಧಾನದ ಪ್ರಸ್ತಾವನೆಯಲ್ಲಿ ಘೋಷಿಸಲಾಗಿರುವ ಸಮಾನತೆ, ಸಾಮಾಜಿಕ ನ್ಯಾಯ, ಸರ್ವ ಸ್ವತಂತ್ರತೆ, ಭಾತೃತ್ವ ಭಾವೈಕ್ಯತೆ, ಸಹಬಾಳ್ವೆಗಳಾದ ಪ್ರಜಾಪ್ರಭುತ್ವ ನೀತಿಗಳು ಅಂದೇ ಸಮಾಜದಲ್ಲಿ ಅನುಷ್ಠಾನಕ್ಕೆ ಬಂದಿದ್ದವು.

ಅಂದಿನ ಸಮಾಜದಲ್ಲಿದ್ದ ಜಾತಿ–ಕುಲ, ಮತ–ಧರ್ಮಗಳ ಗೊಂದಲಗಳನ್ನು ದೂರೀಕರಿಸುವ ಬಸವಣ್ಣನವರ ಆಲೋಚನೆ ಆದರ್ಶಗಳು ವಚನಗಳ ರೂಪದಲ್ಲಿ ಹೊರಹೊಮ್ಮಿ ಜನರ ಮೇಲೆ ಪ್ರಭಾವ ಬೀರಿದವು. ಆ ಆಲೋಚನೆ ಸಮಾನ ಆದರ್ಶಗಳನ್ನೊಳಗೊಂಡ ಒಂದು ಶರಣರ ಸಮೂಹ ಕಾರ್ಯಪ್ರವರ್ತವಾಗಿ ಐತಿಹಾಸಿಕ ದಾಖಲೆಯನ್ನು ಸೃಷ್ಟಿಮಾಡಿತು. ಸಮಾಜದ ಎಲ್ಲಾ ಜಾತಿಗಳ ಮುಖ್ಯವಾಗಿ ಸಮಾಜದ ಕೆಳಸ್ಥರದವರನ್ನು ಹೊಂದಿದ್ದ ಈ ಶರಣರ ಸಮಾಜ ಇಂದಿನ ಪ್ರಜಾಪ್ರಭುತ್ವ ಮೂಲ ಮಾದರಿಯ ಜಾತ್ಯಾತೀತ ಸಮಾಜವನ್ನು ಹೋಲುತ್ತಿತ್ತು. ಅಲ್ಲದೆ ಸರ್ವರಿಗೂ ಸಮಾನಸ್ಥಾನ–ಮಾನಗಳನ್ನು ಕಲ್ಪಿಸಿ, ತಮ್ಮ ಅಭಿಪ್ರಾಯ ಅನಿಸಿಕೆಗಳನ್ನು ಮುಕ್ತವಾಗಿ ಚರ್ಚಿಸಲು ಅವಕಾಶ ರೂಪಿಸಿಕೊಟ್ಟಿದ್ದ ಆ ಸಮಾಜ/ಕಾಲ ಜನತೆಯ ನೇರ ಪ್ರಜಾಪ್ರಭುತ್ವದ ಮಾದರಿಯಂತಿತ್ತು.

ಮಾನವೀಯ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡಿದ್ದ ಬಸವಣ್ಣ ವಿಶ್ವಮಾನವ ಹಕ್ಕುಗಳನ್ನು ಪ್ರತಿಪಾದಿಸಿ, ಸರ್ವರಿಗು ಅನ್ವಯವಾಗಬೇಕೆಂದು ವಾದಿಸಿದರು. ಪ್ರಜಾಪ್ರಭುತ್ವದ ಮುಖ್ಯ ಗುಣಲಕ್ಷಣಗಳಲ್ಲೊಂದಾದ ಪ್ರಜೆಗಳ ಮೂಲಭೂತ ಹಕ್ಕುಗಳು ಬಸವಣ್ಣನ ಸಮಾಜದಲ್ಲಿ ಅನುಷ್ಠಾನದಲ್ಲಿದ್ದವು. ಪ್ರಸ್ತುತ ಭಾರತದ ಸಂವಿಧಾನದ ಭಾಗ ಮೂರರಲ್ಲಿ ಘೋಷಿಸಲ್ಪಟ್ಟಿರುವ ಮೂಲಭೂತ ಹಕ್ಕುಗಳು ಹನ್ನೆರಡನೆಯ ಶತಮಾನದಲ್ಲಿಯೇ ಶರಣರ ಸಮಾಜದಲ್ಲಿ ಧೃಢಿಕರಿಸಲ್ಪಟ್ಟಿದ್ದವು.

**ಪ್ರಜಾಪ್ರಭುತ್ವದ ಮೂಲ ತತ್ವಗಳಾದ ಸಮಾನತೆ ಮತ್ತು ವ್ಯಕ್ತಿ ಸ್ವಾತಂತ್ರ್ಯ**

**ಸಮಾನತೆ**

'ಅಯ್ಯಾ ಎಂದರೆ ಸ್ವರ್ಗ, ಎಲವೋ ಎಂದರೆ ನರಕ ಕಾಣಿರೋ 'ಎಂಬ ಬೀಜ ಮಂತ್ರವನ್ನು ಸಾರಿ, ಪ್ರತಿಯೊಬ್ಬರನ್ನು ಗೌರವಿಸುವ  ಅಯ್ಯಾ ಅಕ್ಕ ಅವ್ವಾ ಎಂಬ ಪದಗಳನ್ನು ವಚನಗಳಲ್ಲಿ ಸಂಭೋಧಿಸಿ ಜನರ ನಡುವೆ ಗೌರವ ಸಮಾನತೆಯನ್ನು ಹೆಚ್ಚಿಸಲಾಗಿತ್ತು, ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಸಮಾನತೆಗಳನ್ನು ಸಾರಿದ ಬಸವಣ್ಣ ಸಮಾಜದಲ್ಲಿದ್ದ ಉಚ್ಚ–ನೀಚ ಶ್ರೇಣಿಕರಣ ಸಂಪ್ರದಾಯಗಳ ವಿರುದ್ಧ ಸಮಾನತೆ ಆವಕಾಶಗಳು ಸಾರ್ವತ್ರಿಕವಾಗುವಂತೆ ಪ್ರತಿಪಾದಿಸಿದರು. ಆರ್ಥಿಕ ಸಮಾನತೆಗಾಗಿ ಕಾಯಕ ತತ್ವವನ್ನು ಭೋಧಿಸಿ 'ಕಾಯಕವೇ ಕೈಲಾಸ' ಎಂದು ತೋರಿಸಿಕೊಟ್ಟರು. ದುಡಿಮೆ ಮತ್ತು ಪರಿಶ್ರಮಗಳಂತಹ ಆರ್ಥಿಕ ನೀತಿಯನ್ನು ಸಾರಿ, ಉನ್ನತ ದರ್ಜೆ–ಕೆಳದರ್ಜೆಗಳೆನ್ನುವುದರ ವಿರುದ್ಧ ಕುಲ ಕಸುಬುಗಳನ್ನು ಗೌರವಿಸಿ, ತಮ್ಮ ಹೆಸರಿನೊಂದಿಗೆ ವೃತ್ತಿಗಳನ್ನು ಸೇರಿಸಿಕೊಳ್ಳುವ ಸಮಾನತೆಯನ್ನು ರೂಢಿಗೆ ತಂದು, ಆರ್ಥಿಕ ಹಾಗು ಸಾಮಾಜಿಕ ಸಮಾನತೆ ಸ್ಥಾನಮಾನ ನೀಡಲಾಯಿತು.

**ವಾಕ್ ಸ್ವತಂತ್ರ ಮತ್ತು ಅಭಿವ್ಯಕ್ತಿ ಸ್ವತಂತ್ರ**

ಬಸವಾದಿ ಶರಣರಿಂದ ರಚಿತವಾದ ಸಮಾಜವು ಗಣನೀಯವಾಗಿ ಮತ್ತು ಕಾರ್ಯತತ್ಪರತೆಯಲ್ಲಿ ನ್ಯಾಯಸಮ್ಮತ ತೀರ್ಮಾನ ತೆಗೆದುಕೊಳ್ಳುವ ಅಭಿವ್ಯಕ್ತಿ ಸ್ವತಂತ್ರ ಮತ್ತು ವಾಕ್‌ಸ್ವತಂತ್ರಗಳಿಗೆ ಅನುವು ಮಾಡಿಕೊಡುವ ಮೂಲ ಧ್ಯೆಯೋದ್ದೇಶವನ್ನು ಹೊಂದಿತ್ತು. ಇದು ಭಾರತೀಯ ಸಂವಿಧಾನದ ಅನುಚ್ಛೇದ 19ರಲ್ಲಿ ಸ್ಪಷ್ಟನೆಗೊಂಡಿರುವ ವಾಕ್ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕುಗಳನ್ನು ಬಿಂಬಿಸುತ್ತದೆ.

**ಅನುಭವ ಮಂಟಪ ಮತ್ತು ವಿಚಾರಗೋಷ್ಠಿಗಳು**

ಸಂವಿಧಾನದ ಲಕ್ಷಣಗಳನ್ನು ಹೋಲುತ್ತಿದ್ದ ಅನುಭವ ಮಂಟಪವು ವ್ಯಕ್ತಿ–ವ್ಯಕ್ತಿತ್ವ ವಿಕಾಸನದ ಕೇಂದ್ರ ಬಿಂದುವಾಗಿತ್ತು. ಬಸವಣ್ಣನ ಕಾಲದಲ್ಲಿ ಕಾರ್ಯತತ್ಪರವಾಗಿದ್ದ, ಅನುಭವ ಮಂಟಪವು ಜಾತಿ ಲಿಂಗ ವರ್ಣ ಸಾಮರಸ್ಯವನ್ನೊಳಗೊಂಡು ವೈಚಾರಿಕ ಚಿಂತನೆಗಳಿಗೆ ಮಾರ್ಗದರ್ಶನವಾಗಿತ್ತು. ಪ್ರತಿಯೊಬ್ಬರು ವಿಚಾರ ಗೋಷ್ಠಿಗಳಲ್ಲಿ ಮುಕ್ತವಾಗಿ ಚರ್ಚಿಸಬಹುದಾಗಿತ್ತು. ತಮ್ಮ ಅನುಭವ ಅಭಿಪ್ರಾಯಗಳನ್ನು ನಿರ್ಭಿಡೆಯಿಂದ ವಿಚಾರಗೋಷ್ಠಿಗಳಲ್ಲಿ ಮಂಡಿಸಬಹುದಾಗಿತ್ತು. ಜಾತಿ ಕುಲ ವರ್ಗಭೇದಗಳಿಲ್ಲದೆ ಸ್ತ್ರೀ–ಪುರುಷರಿಗೆ ಸಮಾನ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನೀಡಿದ್ದ ಅನುಭವ ಮಂಟಪದ ಈ ವಿಚಾರ ಗೋಷ್ಠಿಗಳು ಆಧುನಿಕ ಪ್ರಜಾಪ್ರಭುತ್ವದ ವೇದಿಕೆಯಂತೆ ಕಾರ್ಯನಿರ್ವಹಿಸುತ್ತಿದುದ್ದಕ್ಕೆ ಸಾಕ್ಷಿಯಾಗಿವೆ.

**ಶೋಷಣೆಯ ವಿರುದ್ಧದ ಹಕ್ಕು**

ಬಸವಾದಿ ಶರಣರು ಅಂದಿನ ಸಮಾಜದಲ್ಲಿದ್ದ ತಾರತಮ್ಯ ಲಿಂಗಭೇದ ದೌರ್ಜನ್ಯಗಳ ವಿರುದ್ಧ ಸಿಡಿದೆದ್ದು, ಸಮಾನತೆ, ಸ್ವಾತಂತ್ರ್ಯ, ಭಾವೈಕ್ಯತೆಯ ಭೋದನೆ ಮಾಡಿ ಹೊಸ ಸಮಾಜವನ್ನು ಸೃಷ್ಟಿಸಿದರು. ಅಲ್ಲದೆ ಮಾನವ ಹಕ್ಕುಗಳಿಗೆ ಆಧ್ಯತೆ ನೀಡಿ, ಸಮಾಜದ ಪ್ರತಿಯೊಬ್ಬ ಸದಸ್ಯರು ಗೌರವ ಮತ್ತು ಆತ್ಮಸ್ಥೈರ್ಯದಿಂದ ಜೀವಿಸಲು ಅನುವು ಮಾಡಿಕೊಡುವಂತೆ ಆಗ್ರಹಿಸಿದರು. ವರ್ಗ ವರ್ಣಗಳ ಸಂಘರ್ಷಗಳಿಲ್ಲದೆ, ಜಾತಿ ಲಿಂಗ ತಾರತಮ್ಯವಿಲ್ಲದೆ ಸಾಮರಸ್ಯತೆಯಿಂದ ಬಾಳುವ ಅವಕಾಶವನ್ನು ಕಲ್ಪಿಸಿ, ಸೌಹಾರ್ಧತೆ–ಭಾತೃತ್ವಗಳಂತ ಪ್ರಜಾಪ್ರಭುತ್ವದ ಸಾಂವಿಧಾನಿಕ ತತ್ವಗಳನ್ನು ಅಂದೇ ನಿರೂಪಿಸಲಾಗಿತ್ತು.

**ಧಾರ್ಮಿಕ ಹಕ್ಕು**

ಸಮಾಜದಲ್ಲಿದ್ದ ಧಾರ್ಮಿಕ ಮೌಢ್ಯಗಳನ್ನು ವಿರೋಧಿಸಿದ್ದ ಬಸವಣ್ಣ, ಆಧ್ಯಾತ್ಮಿಕ ಪ್ರಗತಿಗೆ ಆರಾಧಿಸುವ ಹಕ್ಕು ಸರ್ವರಿಗೂ ಸಮಾನವಾಗಿದೆ ಎಂದು ಉಪದೇಶಿಸಿದ್ದರು, ಮಾನವ ಧರ್ಮವನ್ನು–ಮಾನವೀಯತೆಯನ್ನು ಗೌರವಿಸುವ ಬಸವಣ್ಣ ಮಾನವ ಧರ್ಮವೇ ಪವಿತ್ರವಾದ ಧರ್ಮ ಎನ್ನುತ್ತಾರೆ. ಕಂಡ ಭಕ್ತನಿಗೆ ಕೈ ಮುಗಿಯುವಾತನೇ ಭಕ್ತ, ಮೃದು ವಚನಗಳೇ ಸಕಲ ಜಪಂಗಳಯ್ಯಾ; ಮೃದು ವಚನಗಳೇ ಸಕಲತಪಂಗಳಯ್ಯಾ; ಸದ್ವಿನಯವೇ ಸದಾಶಿವನ ಓಲುಮೆಯಯ್ಯಾ. ಎನ್ನುವ ಇವರ ವಚನ ಮಾನವೀಯತೆಗಿಂತ ಮಿಗಿಲಾದ ಧರ್ಮವಿಲ್ಲವೆಂಬುದನ್ನು ಸಾರುತ್ತದೆ. 'ದೇವಲೋಕ ಮರ್ತ್ಯ ಲೋಕ ಬೇರಿಲ್ಲ ಕಾಣಿರೋ ಸತ್ಯವ ನುಡಿವುದೇ ಸ್ವರ್ಗ! ಎನ್ನುವ ಇವರ ವಚನಗಳು ಧಾರ್ಮಿಕತೆ ಮತ್ತು ನೈತಕತೆಗಳ ಮಿಲನವಾಗಿತ್ತು.

**ಶೈಕ್ಷಣಿಕ ಹಾಗು ಸಾಂಸ್ಕೃತಿಕ ಹಕ್ಕುಗಳು**

ಆ ಕಾಲದ ಸಮಾಜದಲ್ಲಿದ್ದ ಸಾಂಪ್ರದಾಯಿಕ ನಿರ್ಭಂದಗಳಿಂದಾಗಿ, ಕೇವಲ ಉನ್ನತ ಕುಲದವರಿಗೆ ಸೀಮಿತವಾಗಿದ್ದ ಶೈಕ್ಷಣಿಕ ಹಕ್ಕುಗಳನ್ನು ಸಾರ್ವತ್ರಿಕಗೊಳಿಸಿದರು, ಮಹಿಳೆಯರ ಶೈಕ್ಷಣಿಕ ಹಕ್ಕುಗಳಿಗಿದ್ದ ಮಿತಿಗಳನ್ನು ಪ್ರತಿರೋಧಿಸಿ. ಸಮಾನ ಶೈಕ್ಷಣಿಕ ನೀತಿಯನ್ನು ಬಸವಣ್ಣ ಎತ್ತಿಹಿಡಿದರು. ಸಮಾಜಿಕ ತಾರತಮ್ಯಗಳಿಲ್ಲದೆ ಸರ್ವರು ಸಾಂಸ್ಕೃತಿಕ ಚಟುವಟಿಕೆಗಳಲ್ಲಿ, ಅನುಭವ ಮಂಟಪದ ಕಾರ್ಯಗಳಲ್ಲಿ

ಭಾಗವಹಿಸುವ ಅವಕಾಶಗಳನ್ನು ಕಲ್ಪಿಸಲಾಗಿತ್ತು. ಯಾವುದೇ ಕುಲ ಅಥವ ಕಸುಬುಗಳಿಗೆ ಸೇರಿದವರಾದರು ಹೆಣ್ಣು ಗಂಡು ಭೇದ–ಭಾವವಿಲ್ಲದೆ ವಚನಗಳನು ರಚಿಸಿ ಮಂಡಿಸುವ ಅವಕಾಶವಿತ್ತು.

**ನೈತಿಕ ಹಕ್ಕು**

ಆದರ್ಶ–ಆತ್ಮಗೌರವಗಳಿಗೆ ಒತ್ತು ನೀಡಿದ ಬಸವಣ್ಣನವರ ವಚನಗಳು ಆತ್ಮಸಾಕ್ಷಿಗೆ ಚ್ಯುತಿಬಾರದಂತೆ ಕಾರ್ಯತತ್ಪರರಾಗಬೇಕೆಂಬುವ ಅವರ ಧೋರಣೆಗಳು ನೈತಿಕತೆಯನ್ನು ಎತ್ತಿ ಹಿಡಿದು, ಪ್ರತಿಯೊಬ್ಬರು ಅವರ ಕರ್ತವ್ಯ ಪಾಲನೆಯಲ್ಲಿ ಜವಾಬ್ದಾರಿಯುತರಾಗಿರಬೇಕೆಂಬ ನೀತಿಯು ಭಾರತೀಯ ಸಂವಿಧಾನದ ಅನುಚ್ಛೇದ 51 ವಿಭಾಗ(ಅ)ರ ಕರ್ತವ್ಯಪಾಲನೆಯ ಹಕ್ಕುಗಳನ್ನು ಹೋಲುತ್ತದೆ.

**ಸಂವಿಧಾನದ ರಾಜ್ಯ ನಿರ್ದೇಶಕ ತತ್ವಗಳು**

ಭಾರತೀಯ ಸಂವಿಧಾನದ ಭಾಗ 4ರಲ್ಲಿ ನಿರೂಪಿಸಲಾಗಿರುವ ರಾಜ್ಯ ನಿರ್ದೇಶಕ ತತ್ವಗಳಾದ ಸಾಮಾಜಿಕ ನ್ಯಾಯ, ಸಾಮಾಜಿಕ ಆರ್ಥಿಕ ಭದ್ರತೆಗಳಂತಹ ನಿಯಮಗಳು ಬಸವಣ್ಣನ ಕಾಲದ ಸಮಾಜದಲ್ಲಿ ಜಾರಿಲ್ಲಿದ್ದವು. ಕಾಯಕ ಮತ್ತು ದಾಸೋಹಗಳ ತತ್ವವು ದುಡಿಮೆ ಮತ್ತು ಶ್ರಮದಾನದ ಮಹತ್ವವನ್ನು ಸಾರಿತ್ತಲ್ಲದೆ, ಸಾಮಾಜಿಕ ಮತ್ತು ಆರ್ಥಿಕ ಭದ್ರತೆಗೆ ಮಾರ್ಗವಾಗಿತ್ತು. ಮಾನವೀಯ ಮೌಲ್ಯಗಳಿಗೆ ಪ್ರಾಧಾನ್ಯತೆ ನೀಡಿದ್ದ ಬಸವಣ್ಣ, ಸಾಮಾಜಿಕ ವಿಷಮತೆಗಳ ವಿರುದ್ಧ ಸಾಮಾಜಿಕ ಮೌಲ್ಯಗಳನ್ನು ನಿರೂಪಿಸುವ ಚಿಂತನೆಗಳನ್ನು ಹೊಂದಿ, ಸಾಮಾಜಿಕ ನ್ಯಾಯಕ್ಕಾಗಿ ಒತ್ತು ನೀಡಿದ್ದರು. ಆರ್ಥಿಕ ನ್ಯಾಯಕ್ಕಾಗಿ ಅಗ್ರಹಿಸುವ ಬಸವಣ್ಣನ ವಚನ ಸಂಪತ್ತು ಸಂಗ್ರಹಿಸುವುದನ್ನು ವಿರೋಧಿಸಿ 'ನೆಲನನಗೆದು ಮಡಗದಿರಿ ನೆಲನುಂಗಿದಡುಗೊಳದೆ? ಕಣ್ಣಿನಲಿ ನೋಡಿ, ಮಣ್ಣಿನಲಿ ನೆರಹಿಉಣ್ಣದೆ ಹೋಗದಿರಾ?' ಎಂದು ಪ್ರಶ್ನಿಸುತ್ತದೆ.

**ಶಾಸನಗಳು ಮತ್ತು ಕಾರ್ಯಾಂಗ**

ಬಸವಣ್ಣನ ಕಾಲದ ಸಮಾಜದಲ್ಲಿ ಶಾಸನಗಳು ಮತ್ತು ಅವುಗಳ ಕಾರ್ಯರೂಪದಲ್ಲಿದ್ದ ವ್ಯವಸ್ಥೆ ಪ್ರಸ್ತುತ ಸಂವಿಧಾನದ ಮಾದರಿಯ ಶಾಸಕಾಂಗ–ಕಾರ್ಯಂಗಗಳನ್ನು ಹೋಲುತ್ತಿತ್ತು. ಬಸವಣ್ಣನಲ್ಲಿದ್ದ ಒಂದು ವಿಶೇಷ ಗುಣವೆಂದರೆ ಕಾರ್ಯರೂಪದಲ್ಲಿರುವುದನ್ನು ಜನರಿಗೆ ತಿಳಿಸುವುದು, ಸಮಾಜಕ್ಕೆ ಬೋಧಿಸಿದ್ದನ್ನು ಕಾರ್ಯರೂಪಕ್ಕೆ ತರುವುದು. ಸ್ವತಃ ಆ ಸಂಸತ್ತಿನ ಪ್ರಧಾನಿಯಾಗಿದ್ದ ಬಸವಣ್ಣ ಜನರ ಹಕ್ಕುಗಳನ್ನು ಕಾರ್ಯ ರೂಪಗೊಳಿಸುವ ಜವಾಬ್ದಾರಿಯನ್ನು ನಿರ್ವಹಿಸುತ್ತಿದ್ದರು.

**ಸಮಾರೋಪ**

ಪ್ರಜಾಪ್ರಭುತ್ವ ತತ್ವಗಳಲ್ಲಿ ನಂಬಿಕೆಯಿಟ್ಟಿದ್ದ ಬಸವಣ್ಣ ಅಂದಿನ ಸಮಾಜದಲ್ಲಿದ್ದ ಅನ್ಯಾಯಗಳನ್ನು ಪ್ರತಿಭಟಿಸಿ, ಸಮಾನತೆ–ಸಹಬಾಳ್ವೆಗಳಿಗೆ ಒತ್ತು ನೀಡಿದ್ದರು. ಸಾಮಾಜಿಕ ನ್ಯಾಯ, ಆರ್ಥಿಕ ಸಮಾನತೆಗಳ ನಿಯಮಗಳನ್ನು ರೂಢಿಗೆ ತಂದು, ಮಾನವೀಯತೆ ಮಾನವ ಹಕ್ಕುಗಳಿಗೆ ಆದ್ಯತೆ ನೀಡಿ, ಸಂಸಧೀಯ ಪ್ರಜಾಪ್ರಭುತ್ವದ ಮಾದರಿಯನ್ನು ಪ್ರಚಲಿತಗೊಳಿಸಿದ್ದರು. ವಿಶ್ವಮಾನವನಾಗಿ ಪ್ರಖ್ಯಾತರಾದ ಬಸವಣ್ಣ, ಆ ಕಾಲದಲ್ಲಿ ಸಮಾನತೆಯ ಸಮಾಜಕ್ಕಾಗಿ ಪ್ರತಿಪಾದಿಸಿದ ಸಂವಿಧಾನದ ಅಂಶಗಳು ಪ್ರಜಾಪ್ರಭುತ್ವ ತತ್ವಗಳು ಪ್ರಸ್ತುತಕ್ಕೆ ಮಾದರಿಯಾಗಿವೆ.

**ಪರಾಮರ್ಶನ ಗ್ರಂಥಗಳು**


- ಹಿರೇಮಠ ಸಿ. ಎನ್. (1977). ಬಸವ ಮತ್ತು ಮಾನವೀಯತೆ, ಬಸವ ಜರ್ನಲ್, ಸಂಪುಟ–1, ಬೆಂಗಳೂರು.
- ಕಲಬುರ್ಗಿ ಎಂ.ಎಂ. (1992). ವಚನ ಸಾಹಿತ್ಯ ಮತ್ತು ಜೀವನ ಮೌಲ್ಯಗಳು. ಕನ್ನಡ ನುಡಿ, ಮಾರ್ಗ–1, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ಬಸವಣ್ಣನವರ ವಚನ ಸಂಪುಟ, (2006). ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ನಾರಾಯಣ ಪಿ.ವಿ. (2008). ವಚನ ಸಾಹಿತ್ಯ–ಒಂದು ಸಾಂಸ್ಕೃತಿಕ ಅಧ್ಯಯನ. ವಸಂತ ಪ್ರಕಾಶನ. ಬೆಂಗಳೂರು.
- ಶಿರೂರ ಬಿ. ವ್ಹಿ. (2008). ಸಂಶೋಧನ ಚತುರ್ಮುಖ, ವಚನಕಾರರ ಸಮಗ್ರ ಕ್ರಾಂತಿ. ವಿಧ್ಯಾನಿಧಿ ಪ್ರಕಾಶನ ಧಾರವಾಡ.
- ತಿಪ್ಪೇರುದ್ರಸ್ವಾಮಿ ಹೆಚ್. (1995). ವಚನಸಾಹಿತ್ಯ ವೈಚಾರಿಕ ಅದ್ಯಯನ, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.
- ವೈಕುಂಟರಾಜ್. ಬಿ. ವಿ. (1983). ಸನತ್ ಪ್ರಕಾಶನ, ಸಂಪಾದಕರ ಡೈರಿ, ಬೆಂಗಳೂರು.